JULY 16, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಇಂದು, ವಿಶ್ವ ಹಾವು ದಿನ. ಭಯಕ್ಕಿಂತ ಜಾಗೃತಿ,** ಜೀವವೈವಿಧ್ಯ ಸಂರಕ್ಷಣೆ ಮತ್ತು ಮಾನವ–ಹಾವು ಸಂಘರ್ಷಗಳನ್ನು ಕಡಿಮೆ ಮಾಡುವ, ಜನ ಜಾಗೃತಿ ಸಂದೇಶಗಳ ಮೇಲೆ, ಕೇಂದ್ರೀಕರಿಸಿದೆ.

<><><>

**ಕೇರಳದ, ಭಾರತ ವಿಜ್ಞಾನ,** ತಂತ್ರಜ್ಞಾನ ಮತ್ತು ಪರಿಸರ ರಾಜ್ಯ ಮಂಡಳಿ, ಈ ವರ್ಷ "ಶೂನ್ಯ ಹಾವು ಕಡಿತ ಸಾವುಗಳು" ಎಂಬ, ಮಿಷನ್ ಅನ್ನು ನಡೆಸುತ್ತಿದೆ.

<><><>

**ಧಾರವಾಡದ, ಕೆ.ಇ.ಬೋರ್ಡ್ಸ್ ಪ್ರೌಢ ಶಾಲೆಯಲ್ಲಿ,** ನೇಚರ್ ರಿಸರ್ಚ್ ಸೆಂಟರ್, ವನ್ಯಜೀವಿ ತಜ್ಞ, ಪ್ರೊಫೆಸರ್ ಗಂಗಾಧರ ಕಲ್ಲೂರ ಮಾರ್ಗದರ್ಶನದಲ್ಲಿ, ಇಂದು ಮಧ್ಯಾಹ್ನ 2.30ಕ್ಕೆ, ವಿದ್ಯಾರ್ಥಿಗಳಿಗೆ ಹಾವುಗಳ ಕುರಿತ ಪ್ರಾತ್ಯಕ್ಷಿಕೆ, ಆಯೋಜಿಸಿದೆ.

<><><>

**ದೇಶದಲ್ಲೇ ಅತಿ ಹೆಚ್ಚು ರಾಸಾಯನಿಕ ಗೊಬ್ಬರ** ಬಳಸುವ ಜಿಲ್ಲೆಗಳಲ್ಲಿ, ರಾಯಚೂರು ಐದನೇ ಸ್ಥಾನದಲ್ಲಿದೆ ಎಂದು, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪ ಕುಲಪತಿ, ಡಾಕ್ಟರ್ ಹನುಮಂತಪ್ಪ ಮಾಹಿತಿ ನೀಡಿದ್ದಾರೆ. ರಾಯಚೂರು ಕೃಷಿ ವಿಜ್ಞಾನ ಕೇಂದ್ರದಲ್ಲಿ, "ನ್ಯಾನೋ ಗೊಬ್ಬರ" ಕುರಿತ, ವಿಚಾರ ಸಂಕಿರಣ ಉದ್ಘಾಟಿಸಿ, ಅವರು ಮಾತನಾಡಿದರು. ನ್ಯಾನೋ ಗೊಬ್ಬರಗಳ ವೈಜ್ಞಾನಿಕ ಬಳಕೆಯಿಂದ, ಪೋಷಕಾಂಶ ಲಭ್ಯತೆ, ಉತ್ಪಾದನಾ ವೆಚ್ಚ ಕಡಿತಗೊಂಡು, ಇಳುವರಿ ಹೆಚ್ಚಲು ಸಹಕಾರಿ, ಎಂದರು.

<><><>

**ವಿಜಯಪುರದ, ಹಲಸಂಗಿ ಗೆಳೆಯರ ಪ್ರತಿಷ್ಠಾನದ,** 2022 ರಿಂದ 24ರ ವರೆಗಿನ ಮೂರು ವರ್ಷಗಳ, ವಾರ್ಷಿಕ ಗೌರವ ಹಾಗೂ ಯುವ ಪ್ರಶಸ್ತಿಗಳನ್ನು, ಜಿಲ್ಲಾಧಿಕಾರಿ ಡಾಕ್ಟರ್ ಕೆ. ಆನಂದ ಪ್ರಕಟಿಸಿದ್ದಾರೆ. ದಕ್ಷಿಣಕನ್ನಡದ ಡಾಕ್ಟರ್ ಬಿ.ಎ. ವಿವೇಕ ರೈ, ಕಲಬುರಗಿಯ ಪ್ರೊಫೆಸರ್ ಎಚ್.ಟಿ. ಪೋತೆ ಬೆಂಗಳೂರು ನಗರ ಜಿಲ್ಲೆಯ, ಶ್ರೀಮತಿ ನೇಮಿಚಂದ್ರ, ವಾರ್ಷಿಕ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಯುವ ಪ್ರಶಸ್ತಿಗೆ, ವಿಜಯಪುರದ ಡಾಕ್ಟರ್ ವಿನಯ ನಂದಿಹಾಳ, ತುಮಕೂರಿನ ಡಾಕ್ಟರ್ ಕೆ.ಎಂ.ಗೋವಿಂದರಾಜು ಹಾಗೂ ಬೆಂಗಳೂರು ವಿಜಯನಗರದ ಶಶಿ ತರಿಕೇರಿ ಆಯ್ಕೆಯಾಗಿದ್ದಾರೆ.

<><><>

**ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ,** ಎಸ್.ಐ.ಆರ್. ವೇಳಾಪಟ್ಟಿಯನ್ನು, ಕರ್ನಾಟಕ ಸೇರಿದಂತೆ, 4 ರಾಜ್ಯಗಳಲ್ಲಿ, 10 ದಿನಗಳಿಗೆ ವಿಸ್ತರಿಸಿ, ಭಾರತೀಯ ಚುನಾವಣಾ ಆಯೋಗ, ಆದೇಶಿಸಿದೆ. ಆಗಸ್ಟ್ 8 ನೇ ತಾರೀಖಿನ ವರೆಗೆ, ಬೂತ್ ಮಟ್ಟದ ಅಧಿಕಾರಿಗಳು, ಗಣತಿ ನಮೂನೆ ವಿತರಣೆ, ಸಂಗ್ರಹಣೆ ಮತ್ತು ಗಣಕೀಕರಣ ಕಾರ್ಯ, ಕೈಗೊಳ್ಳಲಿದ್ದಾರೆ. ಅಂತಿಮ ಮತದಾರರ ಪಟ್ಟಿ, ಅಕ್ಟೋಬರ್ 19ಕ್ಕೆ ಪ್ರಕಟವಾಗಲಿದೆ. ರಾಜ್ಯಾದ್ಯಂತ, ಈ ವರೆಗೆ, 5 ಕೋಟಿ 30 ಲಕ್ಷ ಗಣತಿ ನಮೂನೆಗಳನ್ನು ವಿತರಿಸಲಾಗಿದೆ. 2 ಲಕ್ಷ 11 ಸಾವಿರ ಮತದಾರರು, ಆನ್‌ಲೈನ್ ಮೂಲಕ, ಸ್ವತಃ ಗಣತಿ ನಮೂನೆ ಭರ್ತಿ ಮಾಡಿದ್ದಾರೆ. 13 ಜಿಲ್ಲೆಗಳು, ಗಣತಿ ನಮೂನೆ ವಿತರಣೆಯಲ್ಲಿ, ಶೇಕಡ ನೂರರಷ್ಟು ಪ್ರಗತಿ ಸಾಧಿಸಿವೆ. 11 ಜಿಲ್ಲೆಗಳು, ಶೇಕಡ 99 ರಷ್ಟು ಪ್ರಗತಿ ಸಾಧಿಸಿವೆ.

<><><>

**ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ವಿಧಾನಸಭಾ ಕ್ಷೇತ್ರದ,** ಮತಗಟ್ಟೆ ಸಂಖ್ಯೆ 143 ರಲ್ಲಿ ಒಟ್ಟು ಸಾವಿರದ 283 ಮತದಾರರಿದ್ದು, ಗಣಕೀಕರಣ ಕಾರ್ಯವನ್ನು, ಜಿಲ್ಲೆಯಲ್ಲೇ ಮೊದಲು ಪೂರ್ಣಗೊಳಿಸುವಲ್ಲಿ, ಅಂಗನವಾಡಿ ಶಿಕ್ಷಕಿ ಶೀಲಾ ಹಾಗೂ ತಂಡ ಯಶಸ್ವಿಯಾಗಿದೆ.

<><><>

**ಮತಗಟ್ಟೆ ಸಂಖ್ಯೆ 16, ವಡ್ಡರಹಟ್ಟಿಯ** ಮತಗಟ್ಟೆ ಅಧಿಕಾರಿ, ಯಲ್ಲಮ್ಮ ವಿಶೇಷಚೇತನರಾಗಿದ್ದು, ವಿಶೇಷ ಮತದಾರರ ಪರಿಷ್ಕರಣೆ ಹಾಗೂ ಗಣಕೀಕರಣ ಕಾರ್ಯ ಪೂರ್ಣಗೊಳಿಸಿ, ಮಾದರಿಯಾಗಿದ್ದಾರೆ. ಒಟ್ಟು 560 ಮತದಾರರ ಪೈಕಿ, 537 ಮತದಾರರ ಮಾಹಿತಿಯನ್ನು ಅವರು ಯಶಸ್ವಿಯಾಗಿ ಡಿಜಿಟೈಸೇಶನ್ ಮಾಡಿದ್ದಾರೆ. ಜಿಲ್ಲಾಧಿಕಾರಿಗಳು ಸನ್ಮಾನಿಸಿ, ಗೌರವಿಸಿದರು.

<><><>

**ಧಾರವಾಡ ನಗರದ,** ಮತಗಟ್ಟೆ ಸಂಖ್ಯೆ 164ರ ಅಧಿಕಾರಿ, ವಿಜಯಕುಮಾರ ಗೋವಿಂದಣ್ಣವರ, ಶೇಕಡ 99ರಷ್ಟು ಗಣತಿ ನಮೂನೆ ವಿತರಿಸಿ, ಗಣಕೀಕರಣ ಕಾರ್ಯ ಆರಂಭಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು, ಮಾಹಿತಿ ನೀಡಿದ್ದಾರೆ.

<><><>

**ಬಿ.ಎಲ್.ಓ. ವಿಜಯಕುಮಾರ ಧ್ವನಿ 34 ಸೆಕೆಂದುಗಳು**

<><><>

**ಚಿಕ್ಕಬಳ್ಳಾಪುರ ಜಿಲ್ಲೆ ಹಾಗೂ ತಾಲೂಕಿನ,** ಅಜ್ಜವಾರ ಗ್ರಾಮ ಪಂಚಾಯಿತಿಯ, ದೊಡ್ಡಕಿರುಗಂಬಿ, ಅಗಲಗುರ್ಕಿ ಗ್ರಾಮ ಪಂಚಾಯಿತಿಯ, ಶ್ರೀರಾಮಪುರ ಹಾಗೂ ಕೊಂಡೇನಹಳ್ಳಿ, ಕಣಿತಹಳ್ಳಿಯಲ್ಲಿ, ಪ್ರಧಾನಮಂತ್ರಿ ಆದರ್ಶ ಗ್ರಾಮ ಯೋಜನೆ ಕಾಮಗಾರಿಗಳಿಗೆ, ಸಂಸದ ಡಾಕ್ಟರ್ ಕೆ.ಸುಧಾಕರ ಇಂದು, ಭೂಮಿಪೂಜೆ ನೆರವೇರಿಸಲಿದ್ದಾರೆ.

<><><>

**ರಾಜ್ಯದ ಕರಾವಳಿ ಜಿಲ್ಲೆಗಳಾದ,** ಉತ್ತರಕನ್ನಡ, ಉಡುಪಿ ಹಾಗೂ ದಕ್ಷಿಣಕನ್ನಡಕ್ಕೆ, ಬಿಸಿಲಿನ ಪ್ರಖರ ಝಳದ ಹಿನ್ನೆಲೆ, ಹವಾಮಾನ ಇಲಾಖೆ, ಇಂದಿಗೆ ಯೆಲ್ಲೋ ಅಲರ್ಟ್ ಘೋಷಿಸಿದೆ. ಮುಂಬರುವ ನಾಲ್ಕು ದಿನ, 3 ರಿಂದ 5 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಹೆಚ್ಚಳವಾಗುವ ಸಾಧ್ಯತೆ ಇದೆ. ಸಾರ್ವಜನಿಕರು ಸೂಕ್ತ ಮುಂಜಾಗ್ರತೆ ವಹಿಸುವಂತೆ, ಜಿಲ್ಲಾಡಳಿತಗಳು ಮನವಿ ಮಾಡಿವೆ. ಬೀದರ ನಲ್ಲಿ, ಸಾಮಾನ್ಯಕ್ಕಿಂತ 7 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ, ಹೆಚ್ಚು ದಾಖಲಾಗಿದ್ದು, 37 ಡಿಗ್ರಿ ಸೆಲ್ಸಿಯಸ್ ವರದಿಯಾಗಿದೆ. ರಾಯಚೂರಿನಲ್ಲಿ ಗರಿಷ್ಟ ಉಷ್ಣಾಂಶ 38 ದಶಾಂಶ 2 ಡಿಗ್ರಿ ಸೆಲ್ಸಿಯಸ್ ಗೆ ಏರಿಕೆಯಾಗಿದೆ. ಉಳಿದ ಜಿಲ್ಲೆಗಳಲ್ಲಿಯೂ, ಸಾಮಾನ್ಯಕ್ಕಿಂತ 2 ರಿಂದ 4 ಡಿಗ್ರಿಗಳಷ್ಟು ಉಷ್ಣಾಂಶ ಹೆಚ್ಚಳವಾಗಿದೆ.

<><><>

**ಧಾರವಾಡ ಭಾರತೀಯ ತಂತ್ರಜ್ಞಾನ ಸಂಸ್ಥೆ – ಐ.ಐ.ಟಿ.** ರಾಜ್ಯಸಭೆ ಸಂಸದರಾದ, ಸುಧಾ ಮೂರ್ತಿ ಅವರನ್ನು, ಪ್ರಥಮ ಬಾರಿಗೆ ಸಂಸ್ಥೆ ನೀಡುತ್ತಿರುವ, ಗೌರವ ಡಾಕ್ಟರೇಟ್‌ಗೆ ಆಯ್ಕೆ ಮಾಡಿದೆ ಎಂದು, ಐ.ಐ.ಟಿ. ನಿರ್ದೇಶಕ ಪ್ರೊಫೆಸರ್ ವೆಂಕಪ್ಪಯ್ಯ ದೇಸಾಯಿ, ತಿಳಿಸಿದ್ದಾರೆ. ನಾಡಿದ್ದು, 18 ರಂದು, ಮಧ್ಯಾಹ್ನ 3 ಗಂಟೆಗೆ, ಐ.ಐ.ಟಿ.ಯ ಪ್ರೇಕ್ಷಾಗೃಹದಲ್ಲಿ, 7ನೇ ಘಟಿಕೋತ್ಸವ ನಡೆಯಲಿದೆ. ಹೊಸ ದಿಲ್ಲಿ ಐ.ಐ.ಟಿ. ಪ್ರಾಧ್ಯಾಪಕ, ಡಾಕ್ಟರ್ ಭೀಮಸಿಂಗ್ ಮುಖ್ಯ ಅತಿಥಿಯಾಗಿ, ಪಾಲ್ಗೊಳ್ಳಲಿದ್ದಾರೆ. ಬಿ.ಟೆಕ್ ಗಣಕಯಂತ್ರ ಅಧ್ಯಯನ ವಿಭಾಗದ ವಿದ್ಯಾರ್ಥಿ, ಆರ್. ಅಮೋಘ ರಾಷ್ಟ್ರಪತಿ ಚಿನ್ನದ ಪದಕಕ್ಕೆ

ಅರ್ಹರಾಗಿದ್ದು, ಅದೇ ವಿಭಾಗದ ಸಿದ್ಧಾರ್ಥ ಸಿಂಗ್ ನಿರ್ದೇಶಕರ ಚಿನ್ನದ ಪದಕ ಪಡೆಯಲಿದ್ದಾರೆ. ಒಟ್ಟು 313 ಜನರಿಗೆ, ಪದವಿಗಳನ್ನು ಗಣ್ಯರು ಪ್ರದಾನಿಸಲಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**